Government of Karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No.4, 100 Ft RING ROAD, BANASHANKARI 3rd STAGE, BENGALURU - 560 085
Email: dpi.dsert.ka@nic.in  Website: http://dsert.kar.nic.in

Phone - 080 26980100
Fax 080 26422377

ಸಂಖ್ಯೆ: DPI.DSERT/ರಾ.ಅ.ಅ.ಸಪ್ತಾಹ/08 ವಿ.ಕಾ/2019-20 ದಿನಾಂಕ: 24/09/2019

## ಸುತ್ತೋಲೆ

ವಿಷಯ : ರಾಷ್ಟ್ರೀಯ ಆವಿಷ್ಕಾರ್ ಸಪ್ತಾಹ 2019 ನ್ನು ದಿನಾಂಕ: 04/11/2019 ರಿಂದ 11/11/2019 ರವರೆಗೆ ಆಯೋಜಿಸುವ ಬಗ್ಗೆ.

ಉಲ್ಲೇಖ: 1) ದಿನಾಂಕ: 17/09/2019 ರಿಂದ 18/09/2019ರವರೆಗೆ NCERT ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿ ಸೂಚಿಸಿದಂತೆ.

2) NCERT ನವದೆಹಲಿ ರವರು ಹೊರಡಿಸಿರುವ ರಾಷ್ಟ್ರೀಯ ಆವಿಷ್ಕಾರ್ ಸಪ್ತಾಹ 2019ರ ಮಾರ್ಗಸೂಚಿಗಳು.

****

ಮೇಲಿನ ವಿಷಯ ಹಾಗೂ ಉಲ್ಲೇಖದನ್ವಯ ದೇಶಾದ್ಯಂತ ಆಕ್ಟೋಬರ್ 15 ರಂದು ದೇಶದ ಹೆಮ್ಮೆಯ ಮಾಜಿ ರಾಷ್ಟ್ರಪತಿಗಳಾದ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ರವರ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ: 14/10/2019 ರಿಂದ 21/10/2019 ರವರೆಗೆ ರಾಷ್ಟ್ರೀಯ ಆವಿಷ್ಕಾರ್ ಸಪ್ತಾಹ ಆಯೋಜಿಸಲು ಸೂಚಿಸಲಾಗಿದೆ. ಆದರೆ ಸದರಿ ದಿನಗಳಲ್ಲಿ ರಾಜ್ಯದಲ್ಲಿ ರಜೆ ಇರುವ ಪ್ರಯುಕ್ತ ಹಾಗೂ ಅಕ್ಟೋಬರ್ ಕೊನೆ ವಾರದಲ್ಲಿ ಸಮುದಾಯದತ್ತ ಶಾಲಾ ಕಾರ್ಯಕ್ರಮಗಳಿರುವ ಹಿನ್ನೆಲೆಗಳಲ್ಲಿ ಈ ಕಾರ್ಯಕ್ರಮವನ್ನು ದಿನಾಂಕ: 04/11/2019 ರಿಂದ 11/11/2019 ರವರೆಗೆ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಈ ಸುತ್ತೋಲೆಯೊಂದಿಗೆ ಉಲ್ಲೇಖ-2ರ ಮಾರ್ಗಸೂಚಿಗಳನ್ನು ಲಗತ್ತಿಸಿದ್ದು, (ಪುಟ ಸಂಖ್ಯೆ 28 ರಿಂದ 54) ಅದನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಅದರಲ್ಲಿನ ವಿವರಗಳಂತೆ ಹಾಗೂ ಈ ಕೆಳಗಿನ ಅಂಶಗಳಂತೆ ಸಪ್ತಾಹವನ್ನು ಹಮ್ಮಿಕೊಳ್ಳಲು ಸೂಚಿಸಿದೆ.

1. ಸಪ್ತಾಹದ ವಿಷಯವು "Water Quality Assessment and Water Conservation" ಆಗಿದೆ.
2. ಆಯಾ ಜಿಲ್ಲೆಯ ಪ್ರತಿ ಬ್ಲಾಕ್‌ನ ಎಲ್ಲಾ ಕರ್ನಾಟಕ ಪಬ್ಲಿಕ್ ಶಾಲೆಗಳ ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳ ವಿಭಾಗಗಳಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳುವುದು. ಇದರ ಜೊತೆ ಪ್ರತಿ ಬ್ಲಾಕ್‌ನಿಂದ ಕನಿಷ್ಠ 5 ಸರ್ಕಾರಿ ಪ್ರೌಢಶಾಲೆಗಳು ಹಾಗೂ ಅದರ ಹತ್ತಿರದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು, 2 ಅನುದಾನಿತ ಪ್ರೌಢಶಾಲೆಗಳು ಹಾಗೂ 3 ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದು. ಪ್ರಯೋಗ / ಸಪ್ತಾಹ ಕೈಗೊಳ್ಳಬೇಕಾದ ಶಾಲೆಗಳ ವಿವರಗಳನ್ನು ಡಯಟ್ ಪ್ರಾಂಶುಪಾಲರು ನಿರ್ಧರಿಸಿ ದಿನಾಂಕ: 30/09/2019 ರಂದು ನಡೆಯುವ ಡಯಟ್ ಪ್ರಾಂಶುಪಾಲರ ಸಭೆಯಲ್ಲಿ ಸಲ್ಲಿಸಲು ಸೂಚಿಸಿದೆ. ಆಯ್ಕೆ ಮಾಡಬೇಕಾದ ಶಾಲೆಗಳಲ್ಲಿ ಪ್ರಾಯೋಗಿಕ ಚಟುವಟಿಕೆಗಳನ್ನು ಕೈಗೊಳ್ಳಲು ಅವಶ್ಯವಾದ ಸರಳ ಪ್ರಯೋಗಾಲಯ ಸಾಮಗ್ರಿಗಳು ಲಭ್ಯವಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.
3. ಮಾರ್ಗಸೂಚಿಯಲ್ಲಿ ವಿವರಿಸಿರುವಂತೆ ನೀರಿನ ಗುಣಮಟ್ಟದ ಕುರಿತಂತೆ ಈ ಕೆಳಗಿನ ಪ್ರಾಯೋಗಿಕ ಚಟುವಟಿಕೆಗಳನ್ನು ಪ್ರೌಢಶಾಲೆಗಳ ವಿಜ್ಞಾನ ಶಿಕ್ಷಕರು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜಿನ ರಸಾಯನಶಾಸ್ತ್ರ ಉಪನ್ಯಾಸಕರ ಮಾರ್ಗದರ್ಶನದಂತೆ ವಿದ್ಯಾರ್ಥಿಗಳಿಂದಲೇ ಏರ್ಪಡಿಸುವುದು.
   - Collection of water sample.
   - Foaming capacity of water.
   - Testing the pH of water.
   - Testing Total Alkalinity o f water.



Scanned by CamScanner

- Total Dissolved solids in water.

ಮೇಲಿನ ಪ್ರಾಯೋಗಿಕ ಚಟುವಟಿಕೆಗಳನ್ನು ಮಾರ್ಗಸೂಚಿಯ ಪುಟ ಸಂಖ್ಯೆ 32 ರಿಂದ 43 ರವರೆಗೆ ವಿವರಿಸಿರುವಂತೆ ಕೈಗೊಳ್ಳುವುದು. ಪ್ರಾಯೋಗಿಕ ಚಟುವಟಿಕೆಗಳ ಜೊತೆ ಸಪ್ತಾಹದಲ್ಲಿ ವಿದ್ಯಾರ್ಥಿಗಳಿಗೆ ಜಲ ಸಂರಕ್ಷಣೆ ಮತ್ತು ಜಲಮರುಭರಣದ ಮಹತ್ವ ಮತ್ತು ಜಾಗೃತಿ ಮೂಡಿಸುವಂತಹ ರಸಪ್ರಶ್ನೆ, ಚಿತ್ರ ರಚನೆ ಇತ್ಯಾದಿಗಳನ್ನು ಕೈಗೊಳ್ಳುವುದು. ಉಳಿದಂತೆ ಉಲ್ಲೇಖ (2) ರ ಮಾರ್ಗಸೂಚಿಯ ವಿವರಗಳಂತೆ ಕ್ರಮ ಕೈಗೊಳ್ಳುವುದು.

ಪ್ರಾಯೋಗಿಕ ಚಟುವಟಿಕೆಗಳಲ್ಲಿ ಕಂಡುಕೊಂಡ ಫಲಿತಾಂಶಗಳನ್ನು ಸರಾಸರಿ ಮಾಡಿ ಬಂದ ಫಲಿತಾಂಶವನ್ನು ಫೋಟೋ ವಿಡೀಯೋಗಳ ಸಹಿತ NCERT ರವರ Google Form ನಲ್ಲಿ ಕಡ್ಡಾಯವಾಗಿ ಆನ್‌ಲೈನ್ ಮೂಲಕ ಶಾಲೆಗಳು upload ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು. Google format ನ link ಈ ಕೆಳಗಿನಂತಿದೆ. https://bit.ly/2mhhZ9T.

4. ಕಳೆದ ಬಾರಿ ಕೈಗೊಂಡ ಸಪ್ತಾಹದಲ್ಲಿ ಎಲ್ಲಾ ಬ್ಲಾಕ್‌ಗಳಲ್ಲಿ ಈ ಚಟುವಟಿಕೆಯನ್ನು ನಿರ್ವಹಿಸಿ Google Form ನಲ್ಲಿ ದಾಖಲಿಸದಿರುದನ್ನು ಗಂಭೀರವಾಗಿ ಪರಿಗಣಿಸಿದೆ. ಉಲ್ಲೇಖ (1)ರ ಸಭೆಯಲ್ಲಿ ತಿಳಿದು ಬಂದಂತೆ ತಮಿಳುನಾಡು, ತೆಲಂಗಾಣ, ಪಶ್ಚಿಮ ಬಂಗಾಳ, ಛತ್ತೀಸ್‌ಗಡ, ಗುಜರಾತ್ ರಾಜ್ಯಗಳಲ್ಲಿ ಕಳೆದ ಬಾರಿ ಉತ್ತಮವಾಗಿ ಕಾರ್ಯಕ್ರಮ ಅನುಷ್ಠಾನಗೊಂಡಿದ್ದು, ರಾಜ್ಯದ ಸಾಧನೆ ಉತ್ತಮ ಮಟ್ಟದಲ್ಲಿಲ್ಲ. ಪ್ರಯುಕ್ತ ಈ ಬಾರಿ ಆ ರೀತಿ ಆಗದಂತೆ ಎಚ್ಚರಿಕೆ ವಹಿಸಲು ಡಯಟ್ ಪ್ರಾಂಶುಪಾಲರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿಗಳಿಗೆ ತಿಳಿಸಿದೆ.

5. ಕಾರ್ಯಕ್ರಮ ನಿರ್ವಹಿಸಬೇಕಾದ ಸರ್ಕಾರಿ ಪ್ರೌಢಶಾಲೆಗಳನ್ನು ಕಡ್ಡಾಯವಾಗಿ ಪ್ರತಿ ಬ್ಲಾಕ್‌ನಲ್ಲಿ ಮುಂಚಿತವಾಗಿ ಗುರುತಿಸಿ, ಅಂತಹ ಮುಖ್ಯಶಿಕ್ಷಕರಿಗೆ ಅಗತ್ಯ ಸೂಚನೆಗಳನ್ನು ನೀಡಿ ಕಾರ್ಯಕ್ರಮದ ಅನುಷ್ಠಾನದ ಮೇಲುಸ್ತುವಾರಿ ಮಾಡಲು ಎಲ್ಲ ಡಯಟ್‌ಗಳ ಪ್ರಾಂಶುಪಾಲರುಗಳಿಗೆ ತಿಳಿಸಿದೆ.

ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ, ಬೆಂಗಳೂರು.

**ಇವರಿಗೆ : ಅಗತ್ಯ ಕ್ರಮಕ್ಕಾಗಿ.**

1. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ – ಡಯಟ್ ಪ್ರಾಂಶುಪಾಲರ ಮೂಲಕ
3. ರಾಜ್ಯದ ಎಲ್ಲಾ ಬಿ.ಆರ್.ಸಿಗಳಿಗೆ – ಡಯಟ್ ಪ್ರಾಂಶುಪಾಲರ ಮೂಲಕ.

**ಪ್ರತಿಗಳು : ಮಾಹಿತಿಗಾಗಿ ಸಲ್ಲಿಸಿದೆ.**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ ರವರಿಗೆ.
2. ಮಾನ್ಯ ಆಯುಕ್ತರು, ಸಾ.ಶಿ.ಇ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರಿಗೆ.
4. ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ.
5. ಮಾನ್ಯ ಅಪರ ಆಯುಕ್ತರು, ಸಾ.ಶಿ.ಇ, ಧಾರವಾಡ ಮತ್ತು ಕಲಬುರಗಿ ರವರಿಗೆ.
6. ನಿರ್ದೇಶಕರು, ಪ್ರೌಢಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ.

D:\p4comp32\FY19-20\ETC-8\Nagaraj\inspire.docx

Scanned by CamScanner